## ಹೆಚ್‌ಡಿಆರ್‌ಟಿಎಸ್ ಬಸ್ಸು ಮಾರ್ಗಗಳ ವಿವರ

| ಮಾರ್ಗಗಳ ವಿವರ | ಯಿಂದ | ವರೆಗೆ |
|---|---|---|
| **200A** | ಸಿಬಿಟಿ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್ |
| **201B** | ರೈಲ್ವೆ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಹೊಸ ಬಸ್ ನಿಲ್ದಾಣ |
| **200C** | ಡಾ.ಬಿ.ಆರ್. ಅಂಬೇಡ್ಕರ ನಿಲ್ದಾಣ, ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್ |
| **201D** | ಕೇಂದ್ರೀಯ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಹೊಸ ಬಸ್ ನಿಲ್ದಾಣ |
| **100 D** | ಕೇಂದ್ರೀಯ ಬಸ್ ನಿಲ್ದಾಣ ಹುಬ್ಬಳ್ಳಿ | ಧಾರವಾಡ ಬಿಆರ್‌ಟಿಎಸ್ ಟರ್ಮಿನಲ್. **ನಿಯಮಿತ ನಿಲುಗಡೆ :** ಹೊಸೂರು ವೃತ್ತ, ಕಿಮ್ಸ್, ನವನಗರ, ಎಸ್‌ಡಿಎಂ ಮೆಡಿಕಲ್, ಟೋಲ್‌ನಾಕ, ಎನ್‌ಟಿಟಿಎಫ್, ಕೋರ್ಟವೃತ್ತ, ಜುಬ್ಲಿವೃತ್ತ. |

**ವಿ. ಸೂಚನೆ :** ಸ್ಮಾರ್ಟಕಾರ್ಡನ್ನು ಸಧ್ಯ ಪ್ರಯೋಗಿಕವಾಗಿ ಬಿಡುಗಡೆಗೊಳಿಸಿರುವುದರಿಂದ ಯಾವುದೇ ತಾಂತ್ರಿಕ ಸಮಸ್ಯೆಗಳು ಕಂಡುಬಂದಲ್ಲಿ ಬಿಆರ್‌ಟಿಎಸ್ ಸಿಬ್ಬಂದಿಗಳು ತಾಂತ್ರಿಕ ಸಮಸ್ಯೆಯನ್ನು ಬಗೆ ಹರಿಸುವವರೆಗೆ ಪ್ರಯಾಣಿಕರು ಸಹಕರಿಸಲು ಕೋರಲಾಗಿದೆ




**ಒಟ್ಟಾರೆ ಸಮಯ, ಹಣ ಮತ್ತು ಶ್ರಮದ ಉಳಿತಾಯ**

**ಶೀಘ್ರ, ಸುರಕ್ಷಿತ, ಸುಖಕರ ಪ್ರಯಾಣಕ್ಕಾಗಿ ಹೆಚ್-ಡಿ ಬಿಆರ್‌ಟಿಎಸ್**

E-mail: hdbrts@gmail.com
https : //facebook.com/HubliDharwadBRTS
https : //instagram.com/hubballi_dharwad_brts
https : //twitter.com.HDBRTS
web : www.hdbrts.com




ಕರ್ನಾಟಕ ಸರ್ಕಾರ

# ಹುಬ್ಬಳ್ಳಿ-ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ. ಹುಬ್ಬಳ್ಳಿ

## ವಿದ್ಯಾರ್ಥಿಗಳಿಗೆ ಬಿಆರ್‌ಟಿಎಸ್ ಸ್ಮಾರ್ಟಕಾರ್ಡ ಬಗ್ಗೆ ಮಾಹಿತಿ

ಹುಬ್ಬಳ್ಳಿ-ಧಾರವಾಡ ಬಿಆರ್‌ಟಿಎಸ್ ಯೋಜನೆಯು ಸಾರ್ವಜನಿಕರ ಪ್ರಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ ಅದರಲ್ಲಿ ಸ್ಮಾರ್ಟಕಾರ್ಡ ಕೂಡ ಒಂದು, ಸಾರ್ವಜನಿಕರ ಬಹುನಿರೀಕ್ಷಿತ ಈ ಸ್ಮಾರ್ಟಕಾರ್ಡನ್ನು ಹಲವಾರು ಸೌಲಭ್ಯಗಳೊಂದಿಗೆ ಸಾರ್ವಜನಿಕ ಪ್ರಯಾಣಕ್ಕಾಗಿ ವಿತರಿಸಲಾಗುತ್ತದೆ.

**ಸ್ಮಾರ್ಟಕಾರ್ಡ ವಿಧಗಳು (Types of Smart Card)**

1. ಇ-ಪರ್ಸ ಸ್ಮಾರ್ಟಕಾರ್ಡ (E-Purse Smart Card)
2. ರಿಯಾಯಿತಿ ದರ ಸ್ಮಾರ್ಟಕಾರ್ಡ (Concessional Smart Card)
3. ವಿದ್ಯಾರ್ಥಿಗಳ ಸ್ಮಾರ್ಟಕಾರ್ಡ (Student Smart Card)

ಹೀಗೆ ಮೂರು ಮಾದರಿಯಲ್ಲಿ ಸ್ಮಾರ್ಟಕಾರ್ಡಗಳು ಲಭ್ಯವಿದ್ದು ಪ್ರಸ್ತುತ ಪ್ರಾಯೋಗಿಕವಾಗಿ **ವಿದ್ಯಾರ್ಥಿಗಳ ಸ್ಮಾರ್ಟಕಾರ್ಡ** (Student Smart Card) ಗಳನ್ನು ಪ್ರಯಾಣಕ್ಕಾಗಿ ವಿತರಿಸಲಾಗುತ್ತದೆ.

**ವಿದ್ಯಾರ್ಥಿಗಳ ಸ್ಮಾರ್ಟಕಾರ್ಡ** (Student Smart Card)

ವಿದ್ಯಾರ್ಥಿ ರಿಯಾಯಿತಿ ಪಾಸ್‌ಗಳಿಗೆ ಅರ್ಹರಾದವರಿಗೆ ಬಿಆರ್‌ಟಿಎಸ್ ಬಸ್‌ನಲ್ಲಿ ಪ್ರಯಾಣಿಸಲು ವಿದ್ಯಾರ್ಥಿ ಸ್ಮಾರ್ಟಕಾರ್ಡಗಳನ್ನು ಬಳಸಬಹುದಾಗಿದೆ. ಅಧಿಕೃತವಾಗಿ ಪಾಸಗಳನ್ನು ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಇದನ್ನು ಬಳಸುವ ಅವಕಾಶವಿರುವುದಿಲ್ಲ.

**ವಿದ್ಯಾರ್ಥಿ ಸ್ಮಾರ್ಟಕಾರ್ಡಗಳ ವೈಶಿಷ್ಟ ಮತ್ತು ಉಪಯೋಗಗಳು (Features & Uses of Student SmartCard)**

1. ಟಿಕೇಟ್ ಕೌಂಟರ್‌ಗಳಲ್ಲಿ ಸಾಲಿನಲ್ಲಿ ನಿಂತು ಟಿಕೇಟ್ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.
2. ಕಾಗದ ರಹಿತ ವಹಿವಾಟು ಮತ್ತು ಪರಿಸರ ಸ್ನೇಹಿ
3. ಅಧಿಕೃತವಾಗಿ ಪಾಸುಗಳನ್ನು ಪಡೆದ ವಿದ್ಯಾರ್ಥಿ ಒಬ್ಬರಿಗೆ ಮಾತ್ರ ಪ್ರವೇಶ.
4. ವಿದ್ಯಾರ್ಥಿಗಳು ನಿಗದಿತ **(Source)** ಸ್ಥಳದಿಂದ ಬಿಆರ್‌ಟಿಎಸ್ ಬಸ್ ಹತ್ತಿ ನಿಗದಿತ **(Destination)** ಸ್ಥಳಕ್ಕೆ ಮಾತ್ರ ಇಳಿಯಲು ಅವಕಾಶವಿರುವುದು.
5. ವಿದ್ಯಾರ್ಥಿಗಳಿಗೆ ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪ್ರವೇಶ ಮತ್ತು ನಿರ್ಗಮನ ಅತಿ ಸುಲಭ.
6. ವಿದ್ಯಾರ್ಥಿಗಳು ಅಧಿಕೃತವಾದ ದಾಖಲಾತಿಗಳನ್ನು ಸಲ್ಲಿಸಿ ಪ್ರತಿ ವರ್ಷ ಶಾಲೆ/ಕಾಲೇಜಿನ ವಾರ್ಷಿಕ ಅವಧಿಗೆ ಮಾತ್ರ ನವೀಕರಿಸಿಕೊಳ್ಳಬೇಕು.
7. ವಿದ್ಯಾರ್ಥಿಗಳು ಅಧಿಕೃತವಾದ ದಾಖಲೆಗಳನ್ನು ಸಲ್ಲಿಸಿ ಸ್ಮಾರ್ಟಕಾರ್ಡಗಳನ್ನು ಪಡೆಯಬಹುದಾಗಿದೆ.

**ಸ್ಮಾರ್ಟಕಾರ್ಡನ್ನು ಬಳಸುವ ವಿಧಾನ (How to use Smart Card)**

1. ಸ್ಮಾರ್ಟಕಾರ್ಡನ್ನು ಹೊಂದಿದ ವಿದ್ಯಾರ್ಥಿಗಳು ಬಸ್‌ನಿಲ್ದಾಣದಲ್ಲಿ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಕಾರ್ಡನ್ನು ಸ್ಮಾರ್ಟಕಾರ್ಡ ಗುರುತು ಚಿಹ್ನೆ ಇರುವಲ್ಲಿ ತೋರಿಸಿ Tap in ಮಾಡಿಕೊಂಡು ಒಳಗೆ ಪ್ರವೇಶಿಸಬೇಕು ಹಾಗೂ ಕಡ್ಡಾಯವಾಗಿ Tap out ಮಾಡಿಕೊಂಡು ಬಸ್‌ನಿಲ್ದಾಣದಿಂದ ಹೊರಗೆ ಹೋಗಬೇಕು.
2. ವಿದ್ಯಾರ್ಥಿಗಳು ಸರದಿ ಸಾಲಿನಲ್ಲಿ ನಿಂತು ಫೇರ್‌ಗೇಟಿನ ಹತ್ತಿರವಿರುವ ಹಳದಿ ಪಟ್ಟಿಯಿಂದ ಆಚೆ ನಿಂತು ಒಬ್ಬಬ್ಬರಾಗಿ ಸ್ಕ್ಯಾನ್ ಮಾಡಿ ಫೇರ್‌ಗೇಟುಗಳು ತೆರದ ನಂತರ ಬಸ್ ನಿಲ್ದಾಣಕ್ಕೆ ಪ್ರವೇಶಿಸಬೇಕು ಮತ್ತು ನಿರ್ಗಮಿಸಬೇಕು.

**ವಿದ್ಯಾರ್ಥಿಗಳ ಗಮನಕ್ಕೆ (Kind Attention to Students)**

1. ವಿದ್ಯಾರ್ಥಿಗಳಿಗೆ ಒಂದು ಬಾರಿ ನೀಡಲಾದ ಸ್ಮಾರ್ಟಕಾರ್ಡ ಕಳೆದು ಹೋದಲ್ಲಿ, ನಿಯಮಾನುಸಾರ ನಿಗದಿತ ಶುಲ್ಕ ಪಾವತಿಸಿದಲ್ಲಿ ಸ್ಮಾರ್ಟಕಾರ್ಡನ್ನು ಮರು ಹಂಚಿಕೆ ಮಾಡಲಾಗುವುದು.
2. ವಿದ್ಯಾರ್ಥಿಗಳು ಬಸ್ ನಿಲ್ದಾಣದ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಸ್ಮಾರ್ಟ ಕಾರ್ಡನ್ನು ತೋರಿಸಿ ಒಳಗೆ ಪ್ರವೇಶಿಸಿ (Tap In) ಮುಂದಿನ ನಿಲ್ದಾಣದಿಂದ ಹೊರಗೆ ಹೋಗುವಾಗ ಫೇರ್‌ಗೇಟ್‌ನಲ್ಲಿರುವ ಕಪ್ಪುಗ್ಲಾಸಿಗೆ ಕಾರ್ಡನ್ನು ತೋರಿಸದೇ (Without Tap Out) ಹೊರಬಂದಲ್ಲಿ ಸ್ಮಾರ್ಟ ಕಾರ್ಡ ಲಾಕ್ ಆಗುವುದು.
3. ಲಾಕ್ ಆದ ಕಾರ್ಡನ್ನು ಮತ್ತೆ ಪ್ರಾರಂಭಿಸಲು ರೂ. 26/– ದಂಡ ಶುಲ್ಕವಾಗಿ ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಪಾವತಿಸಿ ತಮ್ಮ ಸ್ಮಾರ್ಟಕಾರ್ಡನ್ನು ಚಾಲ್ತಿ ಮಾಡಿಸಿಕೊಳ್ಳಬಹುದು. ಈ ಕುರಿತು ವಿದ್ಯಾರ್ಥಿಗಳು ಸ್ಮಾರ್ಟಕಾರ್ಡ ಪಡೆಯುವ ಸಮಯದಲ್ಲಿ ಸಂಸ್ಥೆಯ ಸಿಬ್ಬಂದಿಯಿಂದ ಸೂಕ್ತ ಮಾರ್ಗದರ್ಶನ ಪಡೆಯುವುದು.
4. ವಿದ್ಯಾರ್ಥಿಗಳು ಬಿಆರ್‌ಟಿಎಸ್ ಬಸ್ ನಿಲ್ದಾಣದ ಒಳಗೆ ಪ್ರವೇಶಿಸಿ ಮತ್ತೊಂದು ಬಸ್ ನಿಲ್ದಾಣದಿಂದ ಹೊರಗೆ ಬರುವ ಸಮಯ 2 ಗಂಟೆ ಮೀರಿದಲ್ಲಿ ಕಾರ್ಡ ಲಾಕ್ ಆಗುವುದು. ಲಾಕ್ ಆದ ಕಾರ್ಡನ್ನು ಚಾಲ್ತಿ ಮಾಡಿಸಲು ಟ್ಯಾಪ್ ಇನ್ (Tap In) ಆದ ನಂತರದ ಸಮಯದಿಂದ ಗಂಟೆಗಳನ್ನು ಲೆಕ್ಕಾಚಾರ ಮಾಡಿ ಪ್ರತಿ ಗಂಟೆಗೆ 10 ರೂಪಾಯಿಯಂತೆ ಗರಿಷ್ಠ ರೂ. 76/– ಗಳವರೆಗೆ ದಂಡಶುಲ್ಕವೆಂದು ಪರಿಗಣಿಸಿ ನಿಲ್ದಾಣದಲ್ಲಿ ಪಾವತಿಸಬೇಕಾಗುವುದು.
5. ಯಾವುದೇ ಸಮಸ್ಯೆಗಳು ಕಂಡುಬಂದಲ್ಲಿ ಬಿಆರ್‌ಟಿಎಸ್ ಸಿಬ್ಬಂದಿಗಳನ್ನು ಸಂಪರ್ಕಿಸುವುದು ಅಥವಾ ಉಚಿತ ಸಹಾಯವಾಣಿಗೆ 18005991010 ಕರೆ ಮಾಡಬಹುದು.
6. ಸ್ಮಾರ್ಟಕಾರ್ಡ ಹೊಂದಿದ ವಿದ್ಯಾರ್ಥಿಗಳು ಪ್ರಯಾಣದ ಸಮಯದಲ್ಲಿ ಸಂಬಂಧಪಟ್ಟ ತನಿಖಾಧಿಕಾರಿಗಳು ಕೇಳಿದಾಗ ಕಾರ್ಡ ತೋರಿಸಿ ತನಿಖೆಗೆ ಸಹಕರಿಸಬೇಕು.
7. ವಿದ್ಯಾರ್ಥಿಗಳು ಸ್ಮಾರ್ಟಕಾರ್ಡಜೊತೆಯಲ್ಲಿ ಕಡ್ಡಾಯವಾಗಿ ಶಿಕ್ಷಣ ಸಂಸ್ಥೆಯ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು ಒಂದು ವೇಳೆ ಗುರುತಿನ ಚೀಟಿ ಹೊಂದಿರದಿದ್ದಲ್ಲಿ ಸೂಕ್ತ ದಂಡವನ್ನು ವಿಧಿಸಲಾಗುವುದು.
8. ವಿದ್ಯಾರ್ಥಿಗಳು ತಮಗೆ ನೀಡಿದ ಸ್ಮಾರ್ಟಕಾರ್ಡನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ತಮ್ಮದಾಗಿದ್ದು ಮತ್ತೊಬ್ಬ ವಿದ್ಯಾರ್ಥಿಗೆ/ಪ್ರಯಾಣಿಕರಿಗೆ ಪರಬಾರೆ ಮಾಡಿದ್ದು ಅಥವಾ ಉಪಯೋಗಿಸಿದ್ದು ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳ ಸ್ಮಾರ್ಟಕಾರ್ಡನ್ನು ವಶಪಡಿಸಿಕೊಂಡು ಮುಂದಿನ ದಿನಗಳಲ್ಲಿ ಅಂತಹ ವಿದ್ಯಾರ್ಥಿಗೆ ಸ್ಮಾರ್ಟಕಾರ್ಡನ್ನು ನೀಡಲಾಗುವುದಿಲ್ಲ ಹಾಗೂ ಅವಶ್ಯವಿದ್ದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು.
9. ಕಡ್ಡಾಯವಾಗಿ ನಿಗದಿತ (**Source**) ಸ್ಥಳದಿಂದ ನಿಗದಿತ (**Destination**) ಸ್ಥಳಕ್ಕೆ ಮಾತ್ರ ಪ್ರಯಾಣಿಸಲು ಅವಕಾಶವಿರುವುದು ಹೊರತಾಗಿ ಮುಂದಿನ ಬಸ್ ನಿಲ್ದಾಣಕ್ಕೆ ಪ್ರಯಾಣಿಸಲು ಅವಕಾಶವಿರುವುದಿಲ್ಲ. ಹಾಗೇನಾದರೂ ಪ್ರಯಾಣ ಮಾಡಿದ್ದಲ್ಲಿ ಮುಂದಿನ ನಿಲ್ದಾಣದಲ್ಲಿ ಫೇರ್‌ಗೇಟ್ ತೆರೆದುಕೊಳ್ಳುವುದಿಲ್ಲ. ಅಂತಹ ಸಮಯದಲ್ಲಿ ರೂ. 260/– ನ್ನು ದಂಡ ಶುಲ್ಕವನ್ನು ವಿಧಿಸಲಾಗುವುದು ಹಾಗೂ ಸ್ಮಾರ್ಟಕಾರ್ಡನ್ನು ವಶಪಡಿಸಿ ಕೊಳ್ಳಲಾಗುವುದು.
10. **ವಿದ್ಯಾರ್ಥಿಗಳಿಗೆ ಬಿ.ಆರ್.ಟಿ.ಎಸ್ ನ 100 ಮಾದರಿಯ ಬಸ್‌ನಲ್ಲಿ ಪ್ರಯಾಣಕ್ಕೆ ಅವಕಾಶವಿರುವುದಿಲ್ಲ,** ಒಂದು ವೇಳೆ ಪ್ರಯಾಣಿಸುತ್ತಿರುವುದು ತನಿಖೆಯ ಸಮಯದಲ್ಲಿ ಕಂಡುಬಂದಲ್ಲಿ ನಿಗದಿತ ದಂಡ ಶುಲ್ಕವನ್ನು ವಿಧಿಸಲಾಗುವುದು ಹಾಗೂ ಸ್ಮಾರ್ಟಕಾರ್ಡನ್ನು ವಶಪಡಿಸಿ ಕೊಳ್ಳಲಾಗುವುದು.

**ವಿದ್ಯಾರ್ಥಿಗಳ ಸ್ಮಾರ್ಟಕಾರ್ಡಗಳ ಬದಲಾವಣೆ (Replacement of Smart Card)**

ಒಂದು ವೇಳೆ ತಾಂತ್ರಿಕ ದೋಷದಿಂದ (Technical Error) ಸ್ಮಾರ್ಟಕಾರ್ಡ ಕಾರ್ಯ ನಿರ್ವಹಿಸದೇ ಇದ್ದಲ್ಲಿ ಮಾತ್ರ ಸ್ಮಾರ್ಟಕಾರ್ಡನ್ನು ಉಚಿತವಾಗಿ ಬದಲಿಸಲು ಅವಕಾಶವಿದ್ದು, ಈ ಪ್ರಕರಣದಲ್ಲಿ ಹೆಚ್ಚುವರಿ ಶುಲ್ಕವಿಲ್ಲದೆ ಕಾರ್ಡನ್ನು ಬದಲಾಯಿಸಲಾಗುತ್ತದೆ. ಒಂದು ವೇಳೆ ವಿದ್ಯಾರ್ಥಿಗಳ ನಿರ್ಲಕ್ಷದಿಂದಾಗಿ ಸದರಿ ಕಾರ್ಡ ಭೌತಿಕವಾಗಿ ಹಾನಿ (Physically Damage) ಆದಲ್ಲಿ ದಂಡ ಸಮೇತವಾಗಿ ನಿಗದಿತ ಶುಲ್ಕ ಪಾವತಿಸಿದಲ್ಲಿ ಸ್ಮಾರ್ಟಕಾರ್ಡನ್ನು ಮರು ಹಂಚಿಕೆ ಮಾಡಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು**
**(For more information please contact below)**

1. ಹೆಚ್‌ಡಿಬಿಆರ್‌ಟಿಎಸ್ ಉಚಿತ ದೂರವಾಣಿ ಸಂಖ್ಯೆ: 18005991010
2. ವೆಬ್ ಪೋರ್ಟಲ್ ವಿಳಾಸ: www.hdbrts.com
3. ಅಹವಾಲುಗಳ ಸ್ವೀಕೃತಿ ಇ–ಮೇಲ್ ವಿಳಾಸ: hdbrts.grievance@gmail.com
4. ಬಸ್ ನಿಲ್ದಾಣದ ಟಿಕೇಟ್ ಕೌಂಟರ್‌ಗಳು
5. ಚಿಗರಿ ಆಪ್ (Chigari App)

*** ವಿ.ಸೂ: ಮೇಲ್ಕಾಣಿಸಿದ ವಿಷಯಗಳು ಸಂದರ್ಭಕ್ಕೆ ಅನುಗುಣವಾಗಿ ಪ್ರಯಾಣಿಕರ ಯಾವುದೇ ಮುನ್ಸೂಚನೆ ಇಲ್ಲದೇ ಬದಲಾವಣೆಗೆ ಒಳಪಡುತ್ತವೆ.**